ಲೋಹಿಯಾ: ಆದರೂ ನಾನು ನನ್ನದೊಂದು ಇಮೇಜನ್ನು ಪ್ರೊಜೆಕ್ಟ್ ಮಾಡಲು ನನಗೆ ಸಾಧ್ಯವಾಗಲಿಲ್ಲ.

ಆಗ ಕೊಂಚ ಲಘು ಧಾಟಿಯಲ್ಲಿ ಚತುರ್ವೇದಿ ಹೇಳಿದರು:

'ಡಾಕ್ಟರ್ ಸಾಹೇಬ್! ನಿಮ್ಮ ಇಮೇಜನ್ನು ಪ್ರೊಜೆಕ್ಟ್ ಮಾಡಲು ನಿಮಗೆ ಟೈಮೇ ಸಿಕ್ಕಲಿಲ್ಲ. ಉಳಿದವರ ಇಮೇಜನ್ನು ಉರುಳಿಸುವುದಕ್ಕೇ ನಿಮ್ಮ ಸಮಯವನ್ನು ಮೀಸಲಾಗಿಟ್ಟಿರಿ.'

ಆ ತಿಂಗಳು ಲೋಹಿಯಾ ಮಾರ್ಟಿನ್ ಲೂಥರ್‌ನ 450ನೇ ಸ್ಮರಣೆಯ ಕಾರ್ಯಕ್ರಮದಲ್ಲಿ ಭಾಗಿಯಾಗಲು ಜರ್ಮನಿಗೆ ಹೊರಡಬೇಕಾಗಿತ್ತು. ಆದರೆ ಪ್ರಾಸ್ಟೇಟ್ ಸಮಸ್ಯೆಗೆ ಸರ್ಜರಿ ಮಾಡಿಸಿಕೊಳ್ಳಲೇಬೇಕಾದ ಸ್ಥಿತಿ ಎದುರಾಯಿತು. 'ಜರ್ಮನಿಯಲ್ಲೇ ಆಪರೇಶನ್ ಮಾಡಿಸಿಕೊಳ್ಳಿ' ಎಂಬ ಸಲಹೆಯೂ ಬಂತು. ಲೋಹಿಯಾ ಯಾರ ಮಾತನ್ನೂ ಕೇಳಲಿಲ್ಲ. ಗೆಳೆಯರಿಗೆ ಹೇಳದೆ ವಿಲ್ಲಿಂಗ್‌ಡನ್ ಆಸ್ಪತ್ರೆ ಸೇರಿದರು. ಕಾರಣ, ಅದು ಜನಸಾಮಾನ್ಯರು, ಬಡವರು ಹೋಗುವ ಆಸ್ಪತ್ರೆಯಾಗಿತ್ತು.

ಲೋಹಿಯಾ ಸುತ್ತ ಹಲವು ಡಾಕ್ಟರು, ನರ್ಸುಗಳು ನೆರೆದಿದ್ದರು. ಲೋಹಿಯಾ ಕೇಳಿದರು: 'ಒಬ್ಬ ರೋಗಿಗೆ ಇಷ್ಟೊಂದು ಜನ ಡಾಕ್ಟರುಗಳೇಕೆ? ಇದು ಸಾಮಾನ್ಯ ಪ್ರಜೆಗೆ ಸಿಗುತ್ತದೆಯೆ? ನನ್ನ ಮೇಲೆ ಯಾಕೆ ಇಷ್ಟೊಂದು ಖರ್ಚು ಮಾಡುತ್ತಿದ್ದೀರಿ?' ಒಮ್ಮೆ ಲೋಹಿಯಾ ಡಾಕ್ಟರನ್ನು ಕೇಳಿದರು: 'ಡಾಕ್ಟ್ರೇ, ನನ್ನ ಕಾಯಿಲೆ ಗುಣ ಆಗುತ್ತಾ?'

ಡಾಕ್ಟರ್: ಖಂಡಿತಾ ಗುಣವಾಗುತ್ತೆ.

ಲೋಹಿಯಾ: ಡಾಕ್ಟ್ರೆ! ನೀವೂ ರಾಜಕಾರಣಿಗಳ ಥರ ಸುಳ್ಳು ಹೇಳೋದನ್ನು ಕಲ್ತಿದೀರ!

ಮತ್ತೊಂದು ದಿನ ಲೋಹಿಯಾ ಹೇಳಿದರು: 'ಡಾಕ್ಟರುಗಳೂ ರಾಜಕಾರಣಿಗಳ ಥರ ಕತ್ತಲಲ್ಲಿ ತಡಕಾಡುತ್ತಿರುತ್ತಾರೆ ಅನ್ನಿಸುತ್ತೆ.'

ಲೋಹಿಯಾ ವಂಶಸ್ಥರ ಒಂದು ವಿಚಿತ್ರ ವಿವರವನ್ನು ಮಧು ಲಿಮಯೆ ಹೇಳುತ್ತಿದ್ದರು: 'ಡಾಕ್ಟರ್ ಸಾಹೇಬರಿಗೆ ತಾನು ಐವತ್ತಾರು, ಐವತ್ತೇಳು ವರ್ಷ ಮೀರಿ ಬದುಕುವುದಿಲ್ಲ, ಯಾಕೆಂದರೆ ತಮ್ಮ ಕುಟುಂಬದಲ್ಲಿ ಯಾರೂ ಈ ವಯಸ್ಸಿನ ನಂತರ ಬದುಕಿಲ್ಲ ಎಂಬ ಭಾವನೆ ಇತ್ತು.'

ಲೋಹಿಯಾ ಆಸ್ಪತ್ರೆ ಸೇರಿರುವ ಸುದ್ದಿ ದೇಶಾದ್ಯಂತ ಹಬ್ಬಿತು.

ರಾಜಿಂದರ್ ಪುರಿ ಬರೆಯುತ್ತಾರೆ: 'ಲೋಹಿಯಾ ಆಸ್ಪತ್ರೆಯಲ್ಲಿ ಸಾವಿನೊಂದಿಗೆ ಸೆಣಸುತ್ತಿದ್ದಾಗ ಜನರಿಗೆ ಇದ್ದಕ್ಕಿದ್ದಂತೆ ಅವರ ಮಹತ್ವದ ಅರಿವಾಯಿತು. ಅವರೀಗ ಮಿಸ್ಟರ್ ಆಪೋಸಿಶನ್ ಆಗಿದ್ದರು. ಪ್ರತಿ ದಿನ ರಿಕ್ಷಾದವರು, ಹೋಟೆಲ್ ಕಾರ್ಮಿಕರು, ಲೇಖಕರು, ಪತ್ರಕರ್ತರು, ತಳ್ಳುಗಾಡಿಯ ವ್ಯಾಪಾರಿಗಳು, ಟೀಚರುಗಳು, ರಾಜಕಾರಣಿಗಳು ವಿಲ್ಲಿಂಗ್‌ಡನ್ ಆಸ್ಪತ್ರೆಯ ಎದುರು ಸೇರುತ್ತಿದ್ದರು; ಡಾಕ್ಟರ್ ಸಾಹೇಬ್ ಗುಣಮುಖರಾಗುವ ಸುದ್ದಿ ಎದುರು ನೋಡುತ್ತಾ ನಿಂತಿರುತ್ತಿದ್ದರು.'

ಆಸ್ಪತ್ರೆಯಲ್ಲಿ ಮಲಗಿದ್ದಾಗಲೂ ಲೋಹಿಯಾ ಲೋಕದ ಸ್ಥಿತಿಗತಿಗಳ ಬಗೆಗೇ ಕನವರಿಸುತ್ತಿದ್ದುದನ್ನು ರಮಾ ಮಿತ್ರ ದಾಖಲಿಸುತ್ತಾರೆ:

ಹಾಸಿಗೆಯಲ್ಲಿ ಮಲಗಿದ್ದ ಲೋಹಿಯಾ ಭೂ ಕಂದಾಯ, ಹಿಂದೂ–ಮುಸ್ಲಿಂ ಏಕತೆ, ಬಡ ರೈತರ ಸ್ಥಿತಿ, ಭಾಷೆಯ ಸಮಸ್ಯೆ ಇವುಗಳ ಬಗೆಗೇ ಮಾತಾಡುತ್ತಿದ್ದರು. ಒಮ್ಮೊಮ್ಮೆ ಲೋಕಸಭೆಯಲ್ಲಿ ಮಾತಾಡುತ್ತಿದ್ದಂತೆಯೂ ಮಾತಾಡುತ್ತಿದ್ದರು: 'ಅಧ್ಯಕ್ಷ ಮಹೋದಯ್! ನೀವು ಸ್ವಾತಂತ್ರ್ಯ, ಸತ್ಯ, ನ್ಯಾಯಗಳಿಗೆ ಸಂಪೂರ್ಣ ರಕ್ಷಣೆ ಕೊಡಬೇಕು.'

ಒಮ್ಮೆ ರಮಾ ಕೈ ಹಿಡಿದು ಲೋಹಿಯಾ ಕೇಳಿದರು: 'ಹೇಳು ಇಳಾ, ನೀನು ನನಗೆ ಸುಳ್ಳು ಹೇಳಬಾರದು. ಈ ದೇಶದಲ್ಲಿ ಏನಾದರೂ ದೊಡ್ಡದು ನಡೆಯುತ್ತಿದೆಯಾ? ಇದು ಫಸ್ಟ್ ರಿಹರ್ಸಲ್.' ಹೀಗೆಂದವರೇ ಇಂಡಿಯಾ–ಪಾಕಿಸ್ತಾನಗಳ ಒಕ್ಕೂಟ ಕುರಿತು ಮಾತಾಡತೊಡಗಿದರು.

ಓಂ ಪ್ರಕಾಶ್ ದೀಪಕ್ ಲೋಹಿಯಾರನ್ನು ನೋಡಲು ಹೋದಾಗ ಹಾಸಿಗೆಯ ಮೇಲೆ ಒರಗಿದ್ದ ಲೋಹಿಯಾ ಭಾರತದ ಅಧಿಕಾರಶಾಹಿ ಕುರಿತ ಪುಸ್ತಕ ಓದುತ್ತಿದ್ದರು.

'ಶೋಷಿತರ ಕೂಗು' ಪತ್ರಿಕೆ ನಡೆಸುತ್ತಿದ್ದ ಗುಲಬರ್ಗಾದ ಸಮಾಜವಾದಿ ವೀರಣ್ಣ ತಿಮ್ಮಾಜಿ ಆಗ ದಿನವಿಡೀ ವಿಲ್ಲಿಂಗ್‌ಡನ್ ಆಸ್ಪತ್ರೆಯ ಬಳಿಯೇ ಇರುತ್ತಿದ್ದರು. ವೀರಣ್ಣ ತಿಮ್ಮಾಜಿ ಹಾಗೂ ಇತರ ಲೇಖಕ, ಲೇಖಕಿಯರು ಕೊಡುವ ಆ ದಿನಗಳ ವಿವರಗಳು:

ಮೊದಮೊದಲು ಸರ್ಜರಿ ಮಾಡಿಸಿಕೊಳ್ಳಲು ಒಪ್ಪದ ಲೋಹಿಯಾ ಕೊನೆಗೂ ಮನಸ್ಸು ಮಾಡಿದರು. ಸೆಪ್ಟೆಂಬರ್ 30. ಲೋಹಿಯಾರ ಶಸ್ತ್ರಕ್ರಿಯೆಯಾಯಿತು. ಶಸ್ತ್ರಕ್ರಿಯೆಯ ನಂತರ ಅವರ ಶರೀರದಿಂದ ಬಹಳಷ್ಟು ರಕ್ತ ಹರಿದು ಹೋಯಿತು. ಲೋಹಿಯಾಗೆ ರಕ್ತ ಕೊಡಲು ನೂರಾರು ಜನರು ಬಂದರು. ಅಕ್ಟೋಬರ್ 1ರಂದು ರಕ್ತದ ಒತ್ತಡ ಹೆಚ್ಚಿತು. ಜ್ವರ ಏರಿತು. ಆಪರೇಶನ್ ಆದಾಗಿನಿಂದ 4ನೇ ತಾರೀಖಿನವರೆಗೆ ಲೋಹಿಯಾ ಪರಿಸ್ಥಿತಿಯಲ್ಲಿ ಸ್ಥಿರತೆ ಬರಲಿಲ್ಲ.

ಅಕ್ಟೋಬರ್ 6. ದೇಹ ಕುಸಿದಂತಾಗಿ ಲೋಹಿಯಾ ಹೇಳಿದರು: ಡಾಕ್ಟರ್, ನನಗಾಗಿ ಬಹಳ ಕಷ್ಟಪಡ್ತಿದೀರಿ. ಸಾಕು ಬಿಡಿ. ನನಗೂ ಸುಸ್ತಾಗಿದೆ.'

ಅವತ್ತು ರಾತ್ರಿ ಲೋಹಿಯಾ ಹೇಳಿದರು: 'ಎಲ್ಲಾ ಮುಗೀತು. ನಾನು ಹೋಗ್ತಾ ಇದೀನಿ.'

ಲೋಹಿಯಾ ಸಾವು, ಬದುಕುಗಳ ನಡುವೆ ತೂಗಾಡುತ್ತಿದ್ದರು. ಜೆ.ಪಿ., ರಮಾ, ಮಧು ಲಿಮಯೆ, ಕಿಶನ್ ಪಟ್ನಾಯಕ್... ಒಬ್ಬರಲ್ಲ ಒಬ್ಬರು ಅಲ್ಲಿರುತ್ತಿದ್ದರು. ಒಂದು ದಿನ ಉಪಪ್ರಧಾನಿ ಮೊರಾರ್ಜಿ ದೇಸಾಯಿ ಲೋಹಿಯಾಗೆ ಏನೋ ಹೇಳಿದರು.

ಗೆಳೆಯರು ಕೇಳಿದರು: ಮೊರಾರ್ಜಿ ಏನು ಹೇಳಿದರು?

ಲೋಹಿಯಾ: ಲೋಕಸಭೆಯಲ್ಲಿ ಆಡಿದಂತೆ ಆಡಬೇಡ, ಡಾಕ್ಟರು ಹೇಳಿದ ಮಾತು ಕೇಳು ಅಂದರು!

ಪ್ರಧಾನಿ ಇಂದಿರಾಗಾಂಧಿಯವರು ಬಂದರು; ಕಾಮರಾಜ್, ಚವಾಣ್... ಹೀಗೆ ಲೋಹಿಯಾರಿಂದ ಟೀಕಿಸಿಕೊಂಡವರೂ ಬರುತ್ತಿದ್ದರು.

ಪ್ರತಿ ದಿನ ಆಸ್ಪತ್ರೆಯ ಹೊರಗೆ ಜನ ಆತಂಕದಿಂದ, ಆಸೆಯಿಂದ ಕೇಳುತ್ತಲೇ ಇದ್ದರು: 'ಡಾಕ್ಟರ್ ಸಾಹೇಬ್ ಹೇಗಿದ್ದಾರೆ?'

11 ಅಕ್ಟೋಬರ್ 1967. ಹಿಂದಿ ಲೇಖಕ ಮಸ್ತ್ರಾಂ ಕಪೂರ್ ಆಸ್ಪತ್ರೆಯ ಹೊರಗೆ ನೆರೆದಿದ್ದ ಜನರ ಗುಂಪಿನಲ್ಲಿ ತಾನು ನಿಂತಿದ್ದ ಗಳಿಗೆಯನ್ನು ನೆನೆಯುತ್ತಾರೆ:

'ಆಸ್ಪತ್ರೆಯೊಳಗಿಂದ ಯಾರಾದರೂ ಬಂದರೆ ಜನ ಅವರ ಮುಖವನ್ನೇ ನೋಡುತ್ತಾ ಆ ಮುಖಭಾವವನ್ನು ಓದಲೆತ್ನಿಸುತ್ತಿದ್ದರು. ಅವತ್ತು ಸಂಜೆ ಲೋಹಿಯಾ ಇದ್ದ ವಾರ್ಡಿನಿಂದ ಮಧು ಲಿಮಯೆ ಹೊರ ಬಂದರು. ಮುಖದಲ್ಲಿ ಉದ್ವಿಗ್ನತೆಯಿತ್ತು; ಭಯಾನಕವಾದ ಸುದ್ದಿಯ ಸೂಚನೆ ಅಲ್ಲಿತ್ತು. ಮಧು ಲಿಮಯೆ ಭರ್‍ರನೆ ಜೀಪಿನಲ್ಲಿ ಹೋದರು. ನನ್ನ ಪಕ್ಕದಲ್ಲಿ ಹಿಂದಿ ಲೇಖಕ ಶ್ರೀಕಾಂತ ವರ್ಮಾ ಕಣ್ಣೀರೊರೆಸಿಕೊಳ್ಳುತ್ತಾ ನಿಂತಿದ್ದರು.'

12 ಅಕ್ಟೋಬರ್ 1967. ನಡುರಾತ್ರಿ ಒಂದು ಗಂಟೆ, ಐದು ನಿಮಿಷಕ್ಕೆ ಲೋಹಿಯಾ ಕಣ್ಮುಚ್ಚಿದರು.

'ವಿಲ್ಲಿಂಗ್‌ಡನ್ ಆಸ್ಪತ್ರೆಯ ಹೊರಗೆ ಹುಲ್ಲುಹಾಸಿನಲ್ಲಿ ಹಲವು ರಾಜಕೀಯ ಪಕ್ಷಗಳ ನಾಯಕರ ದಂಡೇ ನೆರೆಯಿತು. ಲೋಹಿಯಾ ಬದುಕಿರುವವರೆಗೂ ಅವರಿಗೆ ಸಿಗದೆ ಹೋಗಿದ್ದ ಮನ್ನಣೆ ಆಗ ಸಿಕ್ಕಿತು. ನೆಹರೂ ಸಾವು ಭಾರತದ ವ್ಯವಸ್ಥೆಯಲ್ಲಿ ಒಂದು ಶೂನ್ಯವನ್ನು ಸೃಷ್ಟಿಸಿತ್ತು; ಆದರೆ ಲೋಹಿಯಾ ಸಾವು ಆ ವ್ಯವಸ್ಥೆಯನ್ನು ಕಿತ್ತೊಗೆಯಬೇಕೆಂದು ಹೊರಟಿದ್ದ ಬಂಡುಕೋರರಲ್ಲಿ ತಬ್ಬಲಿ ಭಾವವನ್ನು ಸೃಷ್ಟಿಸಿತು. ಯಾವುದೇ ವಿರೋಧ ಪಕ್ಷದಲ್ಲೂ, ಅವರ ಅನುಯಾಯಿಗಳಲ್ಲೂ ಅವರ ಎನರ್ಜಿ, ಧೈರ್ಯ, ಸಂಕಲ್ಪ ಶಕ್ತಿ, ಮುನ್ನೋಟಗಳಿರಲಿಲ್ಲ.' ಇವು ರಾಜಿಂದರ್ ಪುರಿ ಬರೆಯುವ ಮಾತುಗಳು.

ಲೋಹಿಯಾಗೆ ಶ್ರದ್ಧಾಂಜಲಿ ಸಲ್ಲಿಸುತ್ತಾ, ಜಯಪ್ರಕಾಶ್ ನಾರಾಯಣ್ ಕಣ್ಣೀರೊರೆಸಿಕೊಳ್ಳುತ್ತಾ ಹೇಳಿದರು: 'ಲೋಹಿಯಾ ನನಗಿಂತ ಎಂಟು ವರ್ಷ ಚಿಕ್ಕವರು. ನಾನು ಅಲ್ಲಿರಬೇಕಾಗಿತ್ತು. ಅವರು ಇಲ್ಲಿ ನಿಂತು ಮಾತಾಡಬೇಕಾಗಿತ್ತು.'

ಲೋಕಸಭೆಯಲ್ಲಿ ಲೋಹಿಯಾರನ್ನು ಹತ್ತಿರದಿಂದ ಕಂಡಿದ್ದ ಬಾಬು ಜಗಜೀವನರಾಂ ಹೇಳಿದರು: 'ನಾವು ಹರಿಜನರು ಗಾಂಧೀಜಿಯವರನ್ನು ಸುಪ್ರೀಂ ಕೋರ್ಟಿನಂತೆ ನೋಡುತ್ತಿದ್ದೆವು; ಲೋಹಿಯಾ ನಮ್ಮ ಅಡ್ವೊಕೇಟ್ ಜನರಲ್ ಥರ ಇದ್ದರು. ಈಗ ನಾವು ಅಸಹಾಯಕರು; ನಮಗೆ ಸುಪ್ರೀಂ ಕೋರ್ಟೂ ಇಲ್ಲ. ಅಡ್ವೊಕೇಟ್ ಜನರಲ್ಲೂ ಇಲ್ಲ.'

(ಸಶೇಷ)